ಓ ಎಸ್ ನಂಬರ 40/2025
ಪಿ.ಡಬ್ಲ್ಯೂ 1

**ದಿನಾಂಕಃ 29.10.2025.**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಪಾಟೀ ಸವಾಲುಃ ಎ ಜಿ ಪಿ ಅವರಿಂದ ಃ

ನಾನು 4 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಹಣ್ಣಿನ ವ್ಯಾಪಾರ ಮಾಡುತ್ತೇನೆ. ನಾನು ಈ ದಾವೆಯನ್ನು ನನ್ನ ಹೆಸರು ಮತ್ತು ಜನ್ಮ ದಿನಾಂಕ ಸಲುವಾಗಿ ಹೂಡಿರುತ್ತೇನೆ. ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಪ್ರತಿವಾದಿ ಸಲ್ಲಿಸಿದ ತಕರಾರನ್ನು ಓದಿ ತಿಳಿದುಕೊಂಡಿರುತ್ತೇನೆ. ಪಾಲಕರು ನೀಡಿದ ದಾಖಲೆ ಮತ್ತು ಮಾಹಿತಿಯಂತೆ ಶಾಲೆಯವರು ದಾಖಲೆಗಳನ್ನು ದಾಖಲು ಮಾಡಿಕೊಳ್ಳುತ್ತಾರೆ ಎಂದರೆ ಸರಿ. ನಿಮ್ಮ ಪಾಲಕರು ನೀಡಿದ ದಾಖಲೆ ಮತ್ತು ಮಾಹಿತಿಯಂತೆ ನಿಮ್ಮ ಜನ್ಮ ದಿನಾಂಕವನ್ನು 01.06.1981 ಹಾಗೂ ಹೆಸರನ್ನು ಮಹಮದ್ ಅಲೀಪ್ ಎಂದು ದಾಖಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನೀವು 12.01.1981 ರಲ್ಲಿ ಜನಿಸಿರುತ್ತೀರಿ ಹಾಗೂ ನಿಮ್ಮ ಹೆಸರು ಅನೀಪ್ ಎಂದು ಸುಳ್ಳು ಹೇಳುತ್ತಾ ಇದ್ದೀರಿ ಎಂದರೆ ಸರಿಯಲ್ಲ. ಈ ದಾವೆಗೆ ಅನುಕೂಲವಾಗಲಿ ಎಂದು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಯಗಳದ್ದು ಯಾವುದೇ ತಪ್ಪು ಇರದೇ ಇದ್ದರೂ ಸಹ ಸುಳ್ಳು ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನೀವು ಅರ್ಹರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

1ನೇ ಹೆಚ್ಚುವರಿ ಸಿವಿಲ್ ನ್ಯಾ.ಮತ್ತು ಜೆಎಂಎಫ್‌ಸಿ, ಬೈಲಹೊಂಗಲ